

ವಿಗೆಲ್ಯಾಂಡ್ ಶಿಲ್ಪಕಲೋದ್ಯಾನ
ಗೆಲ್ಯಾಂಡನ ಶಿಲ್ಪ

# ಓಸ್ಲೋ ನಗರದಲ್ಲಿ ಸಾವಧಾನದ ನೋಟ

ಉತ್ತರ ಯೂರೋಪ್‌ನ ನಾರ್ವೆ ಮನಮೋಹಕ ಪ್ರಕೃತಿಗೆ ಹೆಸರಾದುದು. ನಾರ್ವೆಯ ರಾಜಧಾನಿ ಓಸ್ಲೋ ನಗರವಂತೂ ಸಾಂಸ್ಕೃತಿಕ ವೈವಿಧ್ಯದಿಂದ ಪ್ರವಾಸಿಗರ ಗಮನಸೆಳೆಯುತ್ತದೆ. ನೊಬೆಲ್ ಪ್ರಶಸ್ತಿಯ ಜನಕನ ನೆಲೆ ಈ ಓಸ್ಲೋ. ನೊಬೆಲ್ ಶಾಂತಿಪ್ರಶಸ್ತಿ ಪ್ರದಾನ ಕಾರ್ಯಕ್ರಮ ಈಗಲೂ ನಡೆಯುವುದು ಅಲ್ಲಿಯೇ.

■ **ಕೆ.ಆರ್. ಉಮಾದೇವಿ ಉರಾಳ**
ಚಿತ್ರಗಳು: ಕೆ.ಎನ್. ಉರಾಳ್

ಯೂರೋಪ್ ದೇಶಗಳ ಪ್ರವಾಸ ಕೈಗೊಳ್ಳುವ ಭಾರತೀಯರ ಸಂಖ್ಯೆ ಸಾಕಷ್ಟಿದ್ದಾರೆ. ಆದರೆ ಉತ್ತರ ಯೂರೋಪಿನ ಸ್ಕಾಂಡಿನೇವಿಯಾ ಪರ್ಯಾಯ ಪ್ರಸ್ಥಭೂಮಿಯ ದೇಶಗಳ ಪ್ರವಾಸ ಸ್ವಲ್ಪಮಟ್ಟಿಗೆ ಅಪರೂಪವೇ. ಈ ದೇಶಗಳಲ್ಲೊಂದಾದ ನಾರ್ವೆ ದೇಶವು ಭೂರಮೆ ನಲ್ಮೆಗೆ ಪಾತ್ರವಾದ ತಾಣಗಳಲ್ಲೊಂದು. ಸ್ಕಾಂಡಿನೇವಿಯಾ ದೇಶಗಳಲ್ಲಿ ಹಾದು ಹೋಗುವ ಉತ್ತರ ಮೇರುವೃತ್ತದಿಂದಾಗಿ ಸೂರ್ಯನೇ ಮುಳುಗದ ವಿದ್ಯಮಾನವೂ ಇಲ್ಲಿ ವರ್ಷದ ಕೆಲವು ದಿನಗಳು ಸಂಭವಿಸುವುದರಿಂದ ಇದನ್ನು 'ಮಧ್ಯ ರಾತ್ರಿಯ ಸೂರ್ಯನ ದೇಶ' ಎಂದೂ ಕರೆಯುವುದುಂಟು.

ಇಲ್ಲಿನ ಹಿಮಾವೃತ ಪರ್ವತ ಶ್ರೇಣಿಗಳು, ಬೇಸಗೆಯ ಜಲಪಾತಗಳು, ಸ್ಪ್ರೂಸ್ ಬರ್ಚ್ ಪೈನ್ ಮರಗಳ ಕಾಡುಗಳು, ನದಿಗಳು, ಖಗಮೃಗಗಳು, ಎಲ್ಲಿ ನೋಡಿದರೂ ಅಲ್ಲಿ ಕಣ್ಣಿಗೆ ಹಬ್ಬವೆನಿಸುವ ಪ್ರಕೃತಿಯ ಬೆಡಗು. ನಾರ್ವೆಯ ರಾಜಧಾನಿ ಓಸ್ಲೋ ಕೂಡ ಹಲವು ವೈಶಿಷ್ಟ್ಯಮಯ ಆಕರ್ಷಣೆಗಳನ್ನೊಳಗೊಂಡ ಸುಂದರ ನಗರ. ಉತ್ತರ ಸಮುದ್ರವನ್ನು ಸೇರುವ ಓಸ್ಲೋಫ್ಯೋರ್ಡ್‌ನ (ಸಮುದ್ರದ ಒಳಚಾಚು) ಮಡಿಲಲ್ಲಿ ಓಸ್ಲೋ ನಗರ ನೆಲೆಗೊಂಡಿದೆ.

## ವಿಗೆಲ್ಯಾಂಡ್ ಶಿಲ್ಪಕಲೋದ್ಯಾನ

ನಮ್ಮ ಗೈಡ್ ಇಲ್ಲ್ಯೂಸ್, ಓಸ್ಲೋ ನಗರ ವೀಕ್ಷಣೆಯಲ್ಲಿ ಪ್ರಥಮ ಆದ್ಯತೆಯದಾದ ಅಲ್ಲಿನ 'ಫ್ರಾಗ್ನರ್ ಪಾರ್ಕ್'ಗೆ ನಮ್ಮನ್ನು ಕರೆದೊಯ್ದಳು. ಅಲ್ಲಿ ಗುಸ್ತಾವ್ ವಿಗಲೆಂಡ್ ಎಂಬ ಶಿಲ್ಪಿ ಕಂಚು, ಗ್ರಾನೈಟ್, ಕಬ್ಬಿಣಗಳ ಸಮ್ಮಿಶ್ರಣದಿಂದ ನಿರ್ಮಿಸಿದ ಆಳೆತ್ತರದ 214 ಶಿಲ್ಪಗಳಿವೆ. ಇವು ಕೇವಲ ಶಿಲ್ಪಗಳಲ್ಲ. ಮಾನವ ಜೀವನ ಚಕ್ರದಲ್ಲಿ ಬಾಲ್ಯ, ತಾರುಣ್ಯ, ಮಧ್ಯವಯಸ್ಸು, ವೃದ್ಧಾಪ್ಯದೊಂದಿಗೆ ಜೀವನ ಮಾಗುವ ಪ್ರಕ್ರಿಯೆಯನ್ನು ಬಿಂಬಿಸುವ ಒಳನೋಟವುಳ್ಳ ಆಧ್ಯಾತ್ಮಿಕ ದೃಷ್ಟಿಕೋನದ ಕಲಾಕೃತಿಗಳು. ಎಲ್ಲವೂ ನಗ್ನ ಶಿಲ್ಪಗಳು. ಆದರೆ ಶಿಲ್ಪದ ಅನುಭಾವಿಕ ದೃಷ್ಟಿಕೋನ ನೋಡುಗರನ್ನು ಪರವಶವಾಗಿಸುತ್ತದೆ. ನಮಗಂತೂ ವೈರಾಗ್ಯದ ಪರಾಕಾಷ್ಠತೆಯಲ್ಲೂ ಅಧರದಲ್ಲಿ ಕಂಡೂ ಕಾಣದ ಬಿರಿದ ಮಲ್ಲಿಗೆ ಮುಗುಳ ನಗು ಬಿಂಬಿಸುವ ಬಾಹುಬಲಿ ನೆನಪಾದ.

ವಯಸ್ಸಿಗನುಗುಣವಾದ ಬದುಕಿನ ವಿವಿಧ